ActionAid Association
139, Richmond Road
Bangalore-560 025
Karnataka, India

ActionAid Association (India)

**ಪತ್ರಿಕಾ ಪ್ರಕಟನೆಗಾಗಿ**

## ಆಹಾರವಿಲ್ಲದೆ, ಉದ್ಯೋಗವಿಲ್ಲದೆ ಮತ್ತು ಶಿಕ್ಷಣವಿಲ್ಲದೆ

ಕೊರೋನಾ ಸಾಂಕ್ರಾಮಿಕ ಹರಡುವಿಕೆಯ ಕಾರಣದಿಂದ ಮಕ್ಕಳು ಎದುರಿಸುತ್ತಿರುವ ಶಿಕ್ಷಣ ಬಿಕ್ಕಟ್ಟು ಮತ್ತೊಮ್ಮೆ ಶೋಷಿತ ಸಮುದಾಯದ ಮಕ್ಕಳ ಐತಿಹಾಸಿಕ ಹೊರಗಿಡುವಿಕೆಯನ್ನು ಮತ್ತೊಮ್ಮೆ ಅಭೂತಪೂರ್ವವಾಗಿ ಉಲ್ಬಣಗೊಳಿಸಿರುವ ಕುರಿತು ಸಾರ್ವಜನಿಕ ಅಹವಾಲು ಕಾರ್ಯಕ್ರಮವನ್ನು ಆಕ್ಷನ್ ಏಯ್ಡ್ ಅಸೋಸಿಯೇಶನ್ ಸಂಸ್ಥೆ ಹಾಗೂ ಸ್ಲಂ ಮಹಿಳಾ ಸಂಘಟನೆಯು ೨೨ ಮಾರ್ಚ್ ೨೦೨೨, ಬೆಂಗಳೂರಿನಲ್ಲಿ ಆಯೋಜಿಸಿತ್ತು. ಈ ಅಹವಾಲಿನ ಶಿಫಾರಸ್ಸುಗಳನ್ನು ಮಾಧ್ಯಮದ ಮೂಲಕ ಸಾರ್ವಜನಿಕರ ಮುಂದಿಡಲು ದಿನಾಂಕ ೧೯.೪.೨೦೨೨ರಂದು ಪ್ರೆಸ್ ಕ್ಲಬ್ ಬೆಂಗಳೂರು ಇಲ್ಲಿ ಪತ್ರಿಕಾಗೋಷ್ಟಿಯನ್ನು ಆಕ್ಷನ್ಏಯ್ಡ್ ಅಸೋಸಿಯೇಶನ್ ಸಂಸ್ಥೆ ಹಾಗೂ ಸ್ಲಂ ಮಹಿಳಾ ಸಂಘಟನೆಯು ಆಯೋಜಿಸಿಲಾಗಿದೆ. ನ್ಯಾಯ ಮಂಡಳಿಯ ಸದಸ್ಯರು ತಮ್ಮ ಶಿಫಾರಸ್ಸುಗಳನ್ನು ಈ ಪತ್ರಿಕಾಗೋಷ್ಟಿಯಲ್ಲಿ ಹಂಚಿಕೊಳ್ಳಲಿರುವರು.

ಈ ಕೆಳಗೆ ಸಾರ್ವಜನಿಕ ಅಹವಾಲಿನ ಶಿಫಾರಸ್ಸುಗಳನ್ನು ಹಾಗೂ ಮೂಲ ಒಳನೋಟಗಳನ್ನು ಪತ್ರಿಕೆಯಲ್ಲಿ ಹಾಗೂ ಮಾಧ್ಯಮಗಳಲ್ಲಿ ಪ್ರಕಟಿಸುವಂತೆ ಕೋರುತ್ತಿದ್ದೇವೆ.

### ಆಹಾರವಿಲ್ಲದೆ, ಉದ್ಯೋಗವಿಲ್ಲದೆ ಮತ್ತು ಶಿಕ್ಷಣವಿಲ್ಲದೆ

"ನಾವು ಉದ್ಯೋಗವಿಲ್ಲದೆ ಇದ್ದೇವೆ, ನಮ್ಮ ಕುಟುಂಬಗಳು ತಿನ್ನಲು ಆಹಾರವಿಲ್ಲದೆ ಪರದಾಡುತ್ತಿದೆ, ನಮ್ಮ ಮಕ್ಕಳು ಶಿಕ್ಷಣವಿಲ್ಲದೆ ಇದ್ದಾರೆ." ಸಾರ್ವಜನಿಕ ಅಹವಾಲಿನಲ್ಲಿ ಪೋಷಕರು ಮನಕಲಕುವ ನುಡಿ.
"೬ ರಿಂದ ೧೪ ವರ್ಷದ ಪ್ರತೀ ಮಕ್ಕಳಿಗೂ ಉಚಿತ ಕಡ್ಡಾಯ ಶಿಕ್ಷಣದ ಹಕ್ಕು ಪ್ರಾಥಮಿಕ ಹಂತ ಪೂರ್ಣ ಪ್ರಮಾಣದಲ್ಲಿ ಮುಗಿಯುವವರೆಗೂ ನೆರೆಹೊರೆಯ ಶಾಲೆಯಲ್ಲಿ ದೊರೆಯಲೇಬೇಕು" – ಉಚಿತ ಹಾಗೂ ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ ೨೦೦೯.

### ವರದಿಯ ಸಾರಾಂಶಗಳು

**ಹಿನ್ನೆಲೆ:**
ಕೋವಿಡ್ ಪ್ರತಿಯೊಂದು ಜೀವನಾವಶ್ಯಕತೆಯ ಮೇಲೆ ಭಯಾನಾಕ ಪರಿಣಾಮ ಬೀರಿದೆ. ಐತಿಹಾಸಿಕವಾಗಿ ಶೋಷಣೆಗೊಳಪಟ್ಟ ಕುಟುಂಬಗಳು ಪ್ರೀತಿಪಾತ್ರರನ್ನು ಕಳೆದುಕೊಂಡಿರುವುದು ಹಾಗೂ ಜೀವನೋಪಾಯವನ್ನು ಕಳೆದುಕೊಂಡಿರುವುದು ಒಂದೆಡೆಯಾದರೆ, ಮಕ್ಕಳ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು, ೨೦ ತಿಂಗಳಿನಿಂದ ಶಾಲೆ ಮುಚ್ಚಿರುವ ಕಾರಣದಿಂದ ಮಕ್ಕಳಿಗೆ ಕಲಿಕೆಯಲ್ಲಾದ ನಷ್ಟ, ಹೆಚ್ಚಿರುವ ಬಾಲ್ಯ ವಿವಾಹ, ಮಕ್ಕಳ ಕಳ್ಳಸಾಗಣಿಕೆ ಹಾಗೂ ಮಕ್ಕಳ ಅಪೌಷ್ಟಿಕತೆ ಈ ಎಲ್ಲಾ ಸಮಸ್ಯೆಗಳನ್ನು ಈ ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳು ಅನುಭವಿಸುವಂತಾಗಿದೆ. ನೂರರಿಂದ, ಸಾವಿರಾರು ಮಕ್ಕಳು ಇಂದು ತಮ್ಮ ಪೋಷಣೆಗೆ, ಆರೋಗ್ಯ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿನಾಶಕಾರಿಯಾದ ಪರಿಣಾಮವನ್ನು ಎದುರಿಸುತ್ತಿದ್ದಾರೆ. ಹೆಚ್ಚಿರುವ ಬಾಲ್ಯವಿವಾಹ, ಬಾಲ ದುಡಿಮೆ, ಕೌಟುಂಬಿಕ ಹಿಂಸೆ ಹಾಗೂ ರಚನಾತ್ಮಕವಾದ ಕಲಿಕೆಯ ಅನುಪಸ್ಥಿತಿಯು, ತೀವ್ರಕರವಾಗಿ ಮಕ್ಕಳ ಶೈಕ್ಷಣಿಕ ಹಿಂಜರಿತಕ್ಕೆ ಕಾರಣವಾಗಿರುವ ಅಂಶಗಳಾಗಿವೆ. ಹೀಗಾಗಿ, ಈ ಸ್ಥಿತಿಯನ್ನು ಶಿಕ್ಷಣದ ತುರ್ತು ಪರಿಸ್ಥಿತಿಯೆಂದು ಕರೆಯಬಹುದು.

ಸ್ಟೇಟ್ ಆಫ್ ವರ್ಕಿಂಗ್ ಇಂಡಿಯಾ ೨೦೨೧- ಕೋವಿಡ್ ೧೯ ರ ಒಂದು ವರ್ಷ- ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯದ ಅಧ್ಯಯನದ ಪ್ರಕಾರ, ಸರಿ ಸುಮಾರು ೨೩೦ ಮಿಲಿಯನ್ ಜನರು, ಕನಿಷ್ಠ ವೇತನ ಬಡತನ ರೇಖೆಯ ಕೆಳಮಟ್ಟದಲ್ಲಿದ್ದು ಪ್ರಾಥಮಿಕವಾಗಿ ಆರ್ಥಿಕತೆ ಆಘಾತ ಎದುರಿಸುತ್ತಿದ್ದಾರೆ. ಈ ಆರ್ಥಿಕ ಬಿಕ್ಕಟ್ಟು ಮಕ್ಕಳ ಶಿಕ್ಷಣಕ್ಕೂ ಧಕ್ಕೆ ತರುತ್ತಿದೆ.

ಶಾಲೆ ಮುಚ್ಚುವಿಕೆಯಿಂದ ಶೇ.೯೦ರಷ್ಟು ಮಕ್ಕಳು ಭಾಷಾ ಕಲಿಕೆಯಲ್ಲಿ ಮತ್ತು ಶೇ.೮೦ರಷ್ಟು ಮಕ್ಕಳು ಗಣಿತ ಕಲಿಕೆಯಲ್ಲಿ ಕನಿಷ್ಠ ಒಂದು ಸಾಮರ್ಥ್ಯವನ್ನು ಕಳೆದುಕೊಂಡಿದ್ದಾರೆಂದು ಈ ಫೌಂಡೇಷನ್ ನಡೆಸಿದ ಇನ್ನೊಂದು ಅಧ್ಯಯನವು ಬಹಿರಂಗಪಡಿಸಿದೆ. ಶಿಕ್ಷಣದ ತುರ್ತು ಪರಿಸ್ಥಿತಿಯ ಕುರಿತು ರಾಷ್ಟ್ರೀಯ ಒಕ್ಕೂಟವು ನಡೆಸಿದ ಅಧ್ಯಯನದ ಪ್ರಕಾರ ಶೇ೮೦ ಕ್ಕಿಂತಲೂ ಹೆಚ್ಚು ಮಕ್ಕಳು ತರಗತಿವಾರು ಮಟ್ಟದಲ್ಲಿಲ್ಲವೆಂದು ತಿಳಿಸಿದೆ. ಆದ್ದರಿಂದ ಶಾಲಾ ಪಠ್ಯಕ್ರಮಗಳಲ್ಲಿ ಹಾಗೂ ಶಿಕ್ಷಣ ಶಾಸ್ತ್ರವನ್ನು ತೀವ್ರವಾಗಿ ಮರುಪರಿಶೀಲಿಸುವ ಅಗತ್ಯವಿದೆ, ಇಲ್ಲದಿದ್ದರೆ, ತರಗತಿವಾರು ಮಟ್ಟದಲ್ಲಿನ ಕಲಿಕಾ ವಿಷಯವನ್ನು ಮಕ್ಕಳು ಕಲಿಯಲು ಸಾಧ್ಯವಾಗುವುದಿಲ್ಲ.

ಕರ್ನಾಟಕದಲ್ಲಿ ಶಾಲೆಗೆ ಹೋಗುತ್ತಿದ್ದ ೪೬೦೦೦ ಮಕ್ಕಳು ಈಗ ಶಾಲೆಯಿಂದ ಹೊರಗಡೆ ಇದ್ದಾರೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಹೊರಗುಳಿದ ಮಕ್ಕಳಲ್ಲಿ ಶೇ.೫ರಷ್ಟು ಮಕ್ಕಳು ಮಾತ್ರ ಶಾಲಾ ವ್ಯವಸ್ಥೆಗೆ ಮರಳಿದ್ದಾರೆ ಎಂದು ಸರ್ಕಾರ ಉಲ್ಲೇಖಿಸಿದೆ.

ಆಕ್ಷನ್‌ಏಯ್ಡ್ ಅಸೋಸಿಯೇಶನ್ ಮತ್ತು ಸ್ಲಂ ಮಹಿಳಾ ಸಂಘಟನೆಯು ದಿನಾಂಕ ೨೨ ಮಾರ್ಚ್ ೨೦೨೨ರಂದು, ಕೋವಿಡ್ ಬಿಕ್ಕಟ್ಟು ಮಕ್ಕಳ ಶಿಕ್ಷಣದ ಮೇಲೆ ಬೀರಿರುವ ಪರಿಣಾಮಗಳ ಕುರಿತು ಸಾರ್ವಜನಿಕ ಅಹವಾಲು ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ನಡೆಸಿತ್ತು. ಈ ಅಹವಾಲು ಕಾರ್ಯಕ್ರಮದಲ್ಲಿ ಮಕ್ಕಳು ಮತ್ತು ಪೋಷಕರು ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾ, ಹಕ್ಕೊತ್ತಾಯವನ್ನು ಮುಂದಿಟ್ಟರು. ಎರಡೂ ಸಂಘಟನೆಗಳು ಸೇರಿ ಒಟ್ಟು ೬೪ ಕೇಸ್ಸ್ಟಡಿಗಳನ್ನು ರಾಜ್ಯದ ೫ ಜಿಲ್ಲೆಗಳನ್ನು ಒಳಗೊಂಡಂತೆ ಕ್ರೋಢೀಕರಿಸಿದ್ದರು. ಅದರಲ್ಲಿ ೧೪ ನೊಂದ ಮಕ್ಕಳು ಮತ್ತು ತೊಂದರೆಗೀಡಾದ ಪೋಷಕರು ಕೋವಿಡ್ ಲಾಕ್ಡೌನ್ ನಂತರದ ಸಮಯದಲ್ಲಿ ತಾವು ಬದುಕಲು ಹೆಣಗಾಡುತ್ತಿರುವ ಪರಿಸ್ಥಿತಿ ಮತ್ತು ಮಕ್ಕಳ ಶಿಕ್ಷಣದ ಮೇಲೆ ಎದುರಾಗಿರುವ ಕಷ್ಟಗಳನ್ನು ಈ ಅಹವಾಲಲ್ಲಿ ನೇರವಾಗಿ ಮುಂದಿಟ್ಟರು.

ಶ್ರೀ ನರಸಿಂಹಯ್ಯ, ನಿರ್ದೇಶಕರು ಪ್ರಾಥಮಿಕ ಶಿಕ್ಷಣ ಇಲಾಖೆ, ಸಾರ್ವಜನಿಕ ಶಿಕ್ಷಣ ಆಯೋಗ, ಕರ್ನಾಟಕ ಸರ್ಕಾರ; ಶ್ರೀ ದೇವರಾಜ್, ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಕರ್ನಾಟಕ ಸರ್ಕಾರ; ಮತ್ತು ಡಾ.ಅಂಜುಂ ಹಫೀಜ್, ಪ್ರಧಾನ ವ್ಯವಸ್ಥಾಪಕರು ಕರ್ನಾಟಕ ಅಲ್ಪಸಂಖ್ಯಾತ ನಿಗಮ ಇವರೆಲ್ಲರೂ ಅಹವಾಲಿಗೆ ಪ್ರತಿಕ್ರಿಯಿಸಿದರು.

ಮಕ್ಕಳ ಕುರಿತು ವಿಶೇಷ ಕಾಳಜಿವಹಿಸಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಕವಿತಾ ರತ್ನ ನಿರ್ದೇಶಕರು, ವಕಾಲತ್ತು ಮತ್ತು ಸಂವಹನ ವಿಭಾಗ -ದಿ ಕನ್ಸರ್ನ್ಡ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆ; ಶ್ರೀ ಗುರುಮೂರ್ತಿ ಕಾಶೀನಾಥ್ ನಿರ್ದೇಶಕರು, ಐ ಟಿ ಫಾರ್ ಚೇಂಜ್ ಸಂಸ್ಥೆ ಬೆಂಗಳೂರು ಹಾಗೂ ಸದಸ್ಯರು, ಶಿಕ್ಷಣದ ತುರ್ತು ಸ್ಥಿತಿ ರಾಷ್ಟ್ರೀಯ ಒಕ್ಕೂಟ ಮತ್ತು ವಕೀಲರಾದ ಶ್ರೀ. ವಿನಯ್ ಕೆ. ಶ್ರೀನಿವಾಸ್ ಪರ್ಯಾಯ ಕಾನೂನು ವೇದಿಕೆ ಇವರೆಲ್ಲರೂ ಈ ಅಹವಾಲಿನ ತೀರ್ಪುಗಾರರಾಗಿ ಭಾಗವಹಿಸಿ ಮಕ್ಕಳು ಮತ್ತು ಪೋಷಕರ ಅಹವಾಲುಗಳನ್ನು, ಹಾಗೂ ರಾಜ್ಯದ ಇಲಾಖಾಧಿಕಾರಿಗಳ ಪ್ರತಿಕ್ರಿಯೆಯನ್ನು ಆಲಿಸಿ, ಈ ವರದಿಯನ್ನು ಅವರೇ ಸಿದ್ಧಪಡಿಸಿದ್ದಾರೆ.

**ಅವಲೋಕನಗಳು ಮತ್ತು ಪ್ರಮುಖ ಸಮಸ್ಯೆಗಳು**
**ಸಮಗ್ರ ಸಮಸ್ಯೆಗಳು:**

೧. ಮಕ್ಕಳ ಪೋಷಕರು ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಖಾತರಿಪಡಿಸಿಕೊಳ್ಳಲಾಗದೆ ಬಹಳ ಸಂಕಟದಲ್ಲಿದ್ದಾರೆ. ಪ್ರಸ್ತುತವಾಗಿ ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಅವರು ಪಡುತ್ತಿರುವ ನಿರಂತರ ಹೋರಾಟವನ್ನು ತಮ್ಮ ಕಣ್ಣೀರಿನ ಮೂಲಕ ಅಹವಾಲಿನಲ್ಲಿ ಮುಂದಿಟ್ಟರು.
೨. ಸಾಂಕ್ರಾಮಿಕ ರೋಗ ಹರಡುವಿಕೆಯ ಕಾರಣಕ್ಕಾಗಿ ಮಕ್ಕಳು ೨ ವರ್ಷ ಪೂರ್ತಿಯಾಗಿ ಶಾಲೆಯಿಂದ ಹೊರಗುಳಿದಿದ್ದಾರೆ. ಇನ್ನೂ ಉತ್ತರ ಕರ್ನಾಟಕದ ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ೪ ವರ್ಷಗಳಿಂದಲೂ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ.
೩. ಆರ್ಥಿಕತೆ, ಮಕ್ಕಳ ಶೈಕ್ಷಣಿಕ ಶುಲ್ಕ ಪಾವತಿಸಲು ಸಾಧ್ಯವಿಲ್ಲ, ಬಾಲ ದುಡಿಮೆ ಹಾಗೂ ಬಾಲ್ಯ ವಿವಾಹ ಹೀಗೆ ನಾನಾ ಕಾರಣಕ್ಕಾಗಿ ಮಕ್ಕಳು ಶಾಲೆಗೆ ಮರು ಸೇರ್ಪಡೆಗೊಳ್ಳುವ ಕುರಿತು ಮಕ್ಕಳು ಹಾಗೂ ಪೋಷಕರು ಅನಿಶ್ಚಿತತೆಯನ್ನು ವ್ಯಕ್ತಪಡಿಸಿರುವರು.
೪. ಮಕ್ಕಳು ನಿರಂತರವಾಗಿ ಬಹಳಷ್ಟು ಸಮಯದಿಂದ ಕಲಿಕೆಯಿಂದ ಹೊರಗುಳಿದಿರುವುದರಿಂದ ಅಥವಾ ಇತರೆ ಯಾವುದೇ ಚಟುವಟಿಕೆಯಲ್ಲಿ ತೊಡಗಿಕೊಳ್ಳದೇ ಇರುವುದರಿಂದಾಗಿ ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರಿದೆ. ತುರ್ತು ಪರಿಸ್ಥಿತಿಯಿಂದ ಕುಟುಂಬಗಳು ಅನುಭವಿಸಿದ ಬಿಕ್ಕಟ್ಟು ಅವರನ್ನು ಹೇಗೆ ಒತ್ತಡವನ್ನು ತಂದಿತ್ತು ಎಂಬ ವಿಷಯವನ್ನು ಮುಂದಿಟ್ಟಿರುವರು.
೫. ಗ್ರಾಮೀಣ ಭಾಗದಲ್ಲಿ (ಬೆಳಗಾವಿ, ಬಾಗಲಕೋಟೆ, ಕೊಡಗು) ಮಕ್ಕಳು ಶಾಲೆಯಿಂದ ಹೊರಗಡೆ ಉಳಿದು, ಇಟ್ಟಂಗಿಭಟ್ಟಿಗಳಲ್ಲಿ, ಕಾಫಿ ತೋಟಗಳಲ್ಲಿ, ಹಾಗೂ ಇತರೆ ವಲಯಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ದಲಿತ ಮತ್ತು ಮುಸ್ಲಿಂ ಸಮುದಾಯದ ಮಕ್ಕಳು ಹಾನಿಗೊಳಪಟ್ಟು ಬಹಳಷ್ಟು ಕಷ್ಟಕರ ಸ್ಥಿತಿಯಲ್ಲೂ ಇದ್ದು ತಾರತಮ್ಯಕ್ಕೊಳಪಡುತ್ತಿದ್ದಾರೆ.
೬. ತಂದೆ ಅಥವಾ ತಾಯಿ, ಇಬ್ಬರೂ ಪೋಷಕರನ್ನು ಕಳೆದುಕೊಂಡಿರುವ ಮಕ್ಕಳು, ಬಹಳಷ್ಟು ಪ್ರಮಾಣದಲ್ಲಿ ಶಾಲೆಯನ್ನು ಬಿಟ್ಟು ಹೊರಗಡೆ ಉಳಿದಿರುವರು.
೭. ಬದುಕುಳಿಯಲಿಕ್ಕಾಗಿ ಮಕ್ಕಳು ಹೆಚ್ಚಾಗಿ ಬಾಲದುಡಿಮೆಗೆ ತಳ್ಳಲ್ಪಡುತ್ತಿದ್ದಾರೆ. ಈ ಮಕ್ಕಳು ಕಳ್ಳಸಾಗಾಣಿಕೆಗೆ ಒಳಗಾಗುತ್ತಿದ್ದಾರೆ., ಇನ್ನೂ ಕೆಲವು ಮಕ್ಕಳು ಬಾಲ್ಯ ವಿವಾಹಕ್ಕೊಳಗಾಗಿರುವರು. ಕರ್ನಾಟಕ ರಾಜ್ಯ ಭಾರತದ ಇತರೆ ರಾಜ್ಯಗಳಿಗೆ ಹೋಲಿಸಿದಲ್ಲಿ ಈ ಎಲ್ಲಾ ಕಾರಣಕ್ಕಾಗಿ ಬಹಳ ಕೆಳಸ್ತರದಲ್ಲಿದೆ ಎಂದು ಅಂಕಿಅಂಶಗಳೇ ಹೇಳುತ್ತಿದೆ.
೮. ಮದ್ಯವ್ಯಸನ, ಕೌಟುಂಬಿಕ ದೌರ್ಜನ್ಯಗಳು ಹೆಚ್ಚುತ್ತಲಿದೆ. ಮಕ್ಕಳು ಮಾನಸಿಕ ಸವಾಲುಗಳನ್ನು ಎದುರಿಸುತ್ತಿದ್ದಾರೆ. ( ಒತ್ತಡ, ಭೀತಿ, ಶಾಲೆಯಿಂದ ಹೊರಗಡೆ ಉಳಿದಿರುವ ಕಾರಣಕ್ಕಾಗಿ ಮತ್ತು ಸ್ನೇಹಿತರಿಂದ ದೂರ ಉಳಿದಿರುವ ಕಾರಣಕ್ಕಾಗಿ ದೌರ್ಜನ್ಯ ಅನುಭವಿಸುತ್ತಿದ್ದಾರೆ.
೯. ಮುಸ್ಲಿಂ ಹೆಣ್ಣು ಮಕ್ಕಳು ಶಿಕ್ಷಣ ಪಡೆಯದೇ ಇರುವಂತೆ ತಡೆಯುತ್ತಿರುವುದು, ಸಂಪ್ರದಾಯ, ಉಡುಪುಗಳ ಹೆಸರಲ್ಲಿ ಶಿಕ್ಷಣದಿಂದ ಹೊರಗಿಡುವ ಮೂಲಕ ಶಿಕ್ಷಣದಲ್ಲಿ ಅಸಮಾನತೆಯನ್ನು ತೋರುತ್ತಿದ್ದಾರೆ.
೧೦. ಖಾಸಗೀ ಶಾಲಾಡಳಿತ ಮಕ್ಕಳ ಶಾಲಾ ಶುಲ್ಕವನ್ನು ಪೋಷಕರು ಕಟ್ಟಿಲ್ಲವೆಂದು ಪೋಷಕರನ್ನು ಮತ್ತು ಮಕ್ಕಳನ್ನು ಅವಮಾನಿಸುತ್ತಿರುವುದು,
೧೧. ಬಹುಕಾಲ ಶಾಲೆ ಮುಚ್ಚಿರುವ ಕಾರಣ, ಮಕ್ಕಳು ಶಾಲೆಗೆ ಹೋಗಲು ಇನ್ನೂ ತಯಾರಾಗಿಲ್ಲ. ಅವರ ವಯಸ್ಸಿಗೆ ಅನುಗುಣವಾದ ತರಗತಿವಾರು ಶಿಕ್ಷಣ ಅವರಿಗೆ ಕಲಿಸುವುದು ಸೂಕ್ತವಲ್ಲ.
೧೨. ಬುಡಕಟ್ಟು ಸಮುದಾಯದ ಮಕ್ಕಳಿಗೆ ನಡೆಸುತ್ತಿರುವ ಆಶ್ರಮ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ. ಈ ಶಾಲೆಗಳಲ್ಲಿ ಮೂಲ ಸೌಕರ್ಯಕೊರತೆಯ ಜೊತೆಗೆ ಶಿಕ್ಷಣದ ಅಸಮರ್ಪಕವಾಗಿದೆ.

೧೩. ನಿರಂತರ ವಲಸೆಯ ಕಾರಣದಿಂದ ಗ್ರಾಮೀಣ ಭಾಗದಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರಬಹುದು, ಅಥವಾ ಹೆಚ್ಚಿರಲೂ ಸಾಧ್ಯತೆಯಿದೆ. ಮಕ್ಕಳ ದಾಖಲಾತಿ ಪ್ರಮಾಣ ಕಡಿಮೆಯಾಗುತ್ತಿರಬಹುದು. ಹೀಗಾಗಿ ಬೆಂಗಳೂರು ನಗರದಲ್ಲಿ ಈ ಕಾರಣಕ್ಕಾಗಿಯೇ ಮಕ್ಕಳ ಸಂಖ್ಯೆ ಜಾಸ್ತಿಯಾಗಿರಬಹುದು. ಶಾಲಾ ಶುಲ್ಕ ಪಾವತಿಸಲು ಸಾಧ್ಯವಾಗದೆ ಸರ್ಕಾರಿ ಶಾಲೆಗೆ ಮರಳಿ ಸೇರಿರಬಹುದು ಮತ್ತು ಕೆಲವು ಸರ್ಕಾರಿ ಶಾಲೆಯು ಮಕ್ಕಳಿಂದ ತುಂಬಿಕೊಂಡಿರಬಹುದು.
೧೪. ಆನ್‌ಲೈನ್ ಶಿಕ್ಷಣ ಉಪಯೋಗಕಾರಿಯಲ್ಲ. ಇದರ ಬಳಕೆಗೆ ಬೇಕಾದ ಮೊಬೈಲ್ ಗಳಾಗಲಿ, ನೆಟ್‌ವರ್ಕ್ ಸೇವೆಗಳಾಗಲಿ ಬಹಳ ನಗಣ್ಯವಾಗಿದೆ. ಆನ್‌ಲೈನ್ ಶಿಕ್ಷಣ ಪಡೆದ ಮಕ್ಕಳೂ ಕೂಡ ಕಲಿಕೆಯನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಸಾಧ್ಯವಾಗಿಲ್ಲ.
೧೫. ದಲಿತ ಮಕ್ಕಳಿಗೆ ವಿದ್ಯಾರ್ಥಿವೇತನ ಇನ್ನೂ ಸಿಗುತ್ತಿಲ್ಲ. ಶುಲ್ಕ ಮರುಪಾವತಿಯಾಗುತ್ತಿಲ್ಲ.
೧೬. ಕೆಲವೊಂದು ಪ್ರೌಢ ಶಾಲೆಗಳಲ್ಲಿ ಮಹಿಳಾ ಶಿಕ್ಷಕರನ್ನೂ ಇನ್ನೂ ನೇಮಿಸಲಿಲ್ಲ. ಈ ಕಾರಣದಿಂದ ಹದಿಹರೆಯದ ಹೆಣ್ಣು ಮಕ್ಕಳು ತಾವು ಎದುರಿಸುತ್ತಿರುವ ಸಮಸ್ಯೆಯನ್ನು ಯಾರೊಂದಿಗೂ ಹಂಚಿಕೊಳ್ಳಲು ಸಾಧ್ಯವಾಗದೆ ಕಷ್ಟಕರ ಸ್ಥಿತಿಯಲ್ಲಿದ್ದಾರೆ.
೧೭. ಮಕ್ಕಳ ಶಿಕ್ಷಣಕ್ಕಾಗಿ ಅವಶ್ಯವಾಗಿ ಬೇಕಾದ ಜಾತಿ ಹಾಗೂ ಆದಾಯ ಪತ್ರವನ್ನು ಅಧಿಕಾರಿಗಳಿಂದ ಪಡೆಯುವುದೇ ಕಷ್ಟ ಎಂಬ ಅಭಿಪ್ರಾಯವನ್ನು ಪೋಷಕರು ಮುಂದಿಟ್ಟಿದ್ದಾರೆ.
ಈ ಮೇಲಿನ ಸಮಸ್ಯೆಗಳೆಲ್ಲವನ್ನೂ ಪೋಷಕರು, ಸಮುದಾಯ ಸಂಘಟನೆಯ ಸದಸ್ಯರು ಸ್ಥಳೀಯ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ( ಸಮಾಜ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ) ಯಾವುದೇ ಪ್ರಯೋಜನವಾಗಿಲ್ಲ.

**ಬೆಂಗಳೂರು ಮತ್ತು ಇತರೆ ನಗರ ಸಂದರ್ಭ:**
೧. ಬಹು ಸಂಖ್ಯೆಯಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ಸಿಗಬೇಕು ಎನ್ನುವ ಕಾರಣಕ್ಕಾಗಿ; ಮಾತೃಭಾಷೆ ತಮಿಳು, ತೆಲುಗು, ಉರ್ದು ಹಾಗೂ ಇತರೆ ಭಾಷೆಯಲ್ಲಿ ಶಿಕ್ಷಣ ನೀಡುವ ಸರ್ಕಾರಿ ಶಾಲೆ ಇಲ್ಲ ಎಂಬ ಕಾರಣಕ್ಕಾಗಿ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ದಾಖಲಾತಿ ಮಾಡಿದ್ದಾರೆ. ಕೋವಿಡ್ ಸಾಂಕ್ರಾಮಿಕ ರೋಗ ಹರಡುವ ಮುನ್ನ ಎಲ್ಲರೂ ಈ ಖಾಸಗೀ ಶಾಲೆಗಳ ಶುಲ್ಕ ಪಾವತಿಸಿದ್ದಾರೆ.
೨. ಕೋವಿಡ್ ಲಾಕ್ಡೌನ್ ತೆರವುಗೊಂಡ ನಂತರ ಕೆಲಸ ಕಳೆದುಕೊಂಡು, ಕೂಲಿಯಲ್ಲಿ ನಷ್ಟವನ್ನು ಅನುಭವಿಸುತ್ತಾ, ಆರ್ಥಿಕವಾಗಿ ತತ್ತರಿಸಿರುವ ಕುಟುಂಬಗಳಿಗೆ ಶಾಲಾ ಶುಲ್ಕ ಕಟ್ಟಲೂ ಸಾಧ್ಯವಾಗಲಿಲ್ಲ. ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಬಹು ಬಡ್ಡಿ ಹಣವನ್ನೂ ಕಟ್ಟಲು ಮುಂದಾಗಿ ಸಾಲ ಮಾಡಿಯಾದರೂ ೨೦೧೯-೨೦ರ ಸಾಲಿನ ಶುಲ್ಕ ಕಟ್ಟಲು ಪ್ರಯತ್ನವನ್ನು ಪೋಷಕರು ಮಾಡಿರುವರು.
೩. ಲಾಕ್ಡೌನ್ ಸಂದರ್ಭದಲ್ಲಿ ಕೆಲವು ಖಾಸಗೀ ಶಾಲೆಗಳು ಅಸಮರ್ಪಕವಾಗಿ ಆನ್ ಲೈನ್ ಶಿಕ್ಷಣವನ್ನು ನೀಡುತ್ತಿದ್ದು ಇದರಿಂದಾಗಿ ಮಕ್ಕಳು ಶಿಕ್ಷಣ ಪಡೆಯಲೂ ಸಾಧ್ಯವಾಗದೆ, ಅರ್ಥೈಸಿಕೊಳ್ಳಲೂ ಆಗದೆ ಕಲಿಕೆಯಿಂದ ಹೊರಗುಳಿದಿದ್ದಾರೆ.
೪. ಕೋವಿಡ್ ೩ನೇ ಅಲೆಯ ನಂತರ ಶಾಲೆಗಳು ತೆರೆದುಕೊಂಡಿದೆ. ಆದರೆ ಖಾಸಗೀ ಶಾಲೆಗಳಲ್ಲಿನ ಆಡಳಿತ ಮಕ್ಕಳ ಶಾಲಾ ಶುಲ್ಕ ಪಾವತಿಸದೆ ಮಕ್ಕಳನ್ನು  ಶಾಲೆಗೆ ಸೇರಿಸಿಕೊಳ್ಳುವದಕ್ಕೂ ತಡೆಯೊಡ್ಡಿರುವರು, ಪರೀಕ್ಷೆ ಬರೆಯಲು ಬಿಡುವುದಿಲ್ಲ, ಮಕ್ಕಳ ಫಲಿತಾಂಶವನ್ನು ಕೊಡಲೂ ನಿರಾಕರಿಸಿರುವುದು ( ಆರ್ ಟಿ ಇ ಕಾಯ್ದೆ ೨೦೧೯ರನ್ವಯ ಯಾವುದೇ ಮಗುವನ್ನು ೯ನೇ ತರಗತಿಯವರೆಗೂ ಒಂದೇ ತರಗತಿಯಲ್ಲಿ ಅನುತ್ತೀರ್ಣಗೊಳಿಸಿ ಕಾಯ್ದುಕೊಳ್ಳುವಂತಿಲ್ಲ. ಇದು ಮಕ್ಕಳ ಶೈಕ್ಷಣಿಕ ಪ್ರಗತಿಯ ಮೇಲೆ ಪರಿಣಾಮ ಬೀರುವುದೆಂದು ಹೇಳಿದೆ. ಆದರೆ ಪೋಷಕರಿಗೆ ಈ ಮಾಹಿತಿಯ ಕುರಿತು ಅರಿವಿಲ್ಲ)
೫. ಮಕ್ಕಳ ಶೈಕ್ಷಣಿಕ ವರ್ಗಾವಣೆ ಪತ್ರವನ್ನು ಖಾಸಗೀ ಶಾಲೆಗಳಿಂದ ಪಡೆಯಲು ಪೋಷಕರು ಹರಸಾಹಸ ಮಾಡಬೇಕಾಗಿದೆ. ಬಾಕಿಯಿರುವ ಶಾಲಾ ಶುಲ್ಕ ಪಾವತಿದ ಹೊರತು ವರ್ಗಾವಣೆ ಪತ್ರ ನೀಡುವುದಿಲ್ಲ ಎಂದಿದ್ದಾರೆ ಶಾಲಾಡಳಿತ. ೨೦೧೯-೨೦-೨೧ರ ಸಾಲಿನ ಒಟ್ಟು ಮೊತ್ತ ಕನಿಷ್ಠ ಒಂದು ಮಗುವಿಗೆ ರೂ.೮೦೦೦೦/- ದಿಂದ ೧ಲಕ್ಷ ಹಣವನ್ನು  ಪೋಷಕರು ಬಾಕಿ ಶುಲ್ಕವಾಗಿ ಶಾಲೆಗೆ ಕಟ್ಟಬೇಕಾಗಿದೆ ಎಂಬ ಕೆಲವು ನಿದರ್ಶನಗಳಿವೆ.  ವರ್ಗಾವಣೆ ಪತ್ರ ಪಡೆಯಲು ಸ್ಥಳೀಯ ತಾಲ್ಲೂಕು ಶಿಕ್ಷಣಾಧಿಕಾರಿಯವರ ನೆರವನ್ನು ಪಡೆದು ಶಾಲಾ ಮುಖ್ಯಸ್ಥರಿಂದ ಪಡೆಯಬಹುದೆಂಬ ವಿಷಯ ಪೋಷಕರ ಅರಿವಲ್ಲಿಲ್ಲ. ಸ್ಥಳೀಯ ತಾಲ್ಲೂಕು ಶಿಕ್ಷಣಾಧಿಕಾರಿಯವರ ಗಮನಕ್ಕೆ ಕೆಲವು ಪೋಷಕರು ಮುಂದಿಟ್ಟರೂ ಯಾವುದೇ ನೆರವು ಸಿಗಲಿಲ್ಲ ಎಂಬ ಅಭಿಪ್ರಾಯ ಮಂಡಿಸಿದ್ದಾರೆ.
೬. ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ ಈ ಭಾಗಗಳಿಂದ ವಲಸೆ ಬಂದ ಕುಟುಂಬಗಳು ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಿಲ್ಲ, ಕಾರಣ ಅವರ ಮಕ್ಕಳಿಗೆ ಕನ್ನಡ ಮಾಧ್ಯಮ ಅವರಿಗೆ ಗೊತ್ತಿಲ್ಲ. ಅಲ್ಲದೆ ಸರ್ಕಾರಿ ಶಾಲೆಗಳು ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಸುತ್ತಿರಲಿಲ್ಲ. ಈ ಎಲ್ಲಾ ಕಾರಣಕ್ಕಾಗಿ ಅವರು ತಮ್ಮ ಮಕ್ಕಳನ್ನು ಸ್ಥಳೀಯ ಖಾಸಗೀ ಶಾಲೆಗಳಿಗೆ ಸೇರಿಸಿದ್ದರು. ಈ ಮಕ್ಕಳು ಮತ್ತೊಮ್ಮೆ ಕನ್ನಡ ಮಾಧ್ಯಮದಲ್ಲಿ ಕಲಿಯಲು ಸ್ಥಿತ್ಯಂತರಗೊಳ್ಳುವುದು ಕಷ್ಟಕರ. ಹಿರಿಯ ಪ್ರಾಥಮಿಕ ಹಂತದಲ್ಲಿ ಒದುವ ಮಕ್ಕಳಿಗೆ ಮಾಧ್ಯಮ ಬದಲಾವಣೆ ಕಷ್ಟಕರ ಸ್ಥಿತಿಯನ್ನು ತಂದೊಡುತ್ತದೆ.

**ಗ್ರಾಮೀಣ ಜಿಲ್ಲೆಗಳು:**
೧. ಸರ್ಕಾರ ವಿದ್ಯಾಗಮ ಕಾರ್ಯಕ್ರಮ ಜಾರಿಗೊಳಿಸಿದ್ದರೂ ಕೂಡ ಅದರಿಂದ ಅಷ್ಟು ಕಲಿಕೆಗಳು ಸಾಧ್ಯವಾಗಲಿಲ್ಲ. ಪೂರಕ ಕಲಿಕಾ ಪರಿಕರ ಇಲ್ಲದೆಯೇ ವಿದ್ಯಾಗಮ ನಡೆಯುತ್ತಿದ್ದೆಂದು ಬೆಳಗಾವು ಜಿಲ್ಲೆಯ ಮಕ್ಕಳು ಹಂಚಿಕೊಂಡಿರುವರು
೨. ಬೆಳಗಾವಿ ಮತ್ತು ಬಾಗಲಕೋಟೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ದಲಿತ ಯುವ ಜನರು ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಗುರುತಿಸುವಿಕೆ ಮತ್ತು ಅವರಿಗೋಸ್ಕರ ಗ್ರಂಥಾಲಯ ತೆರೆದಿರುವ ಕುರಿತು ಹಂಚಿಕೊಂಡರು. ಹಳ್ಳಿಗಳಲ್ಲಿ ಶಾಲೆ ಬಿಟ್ಟಿರುವ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವ ಕಾರ್ಯಕ್ರಮವನ್ನು ಶಿಕ್ಷಣ ಇಲಾಖೆಯಾಗಲಿ ಮತ್ತು ಸಮಾಜ ಕಲ್ಯಾಣ ಇಲಾಖೆಯಾಗಲಿ ಕಾರ್ಯಗತಗೊಳಿಸಿಲ್ಲ ಎಂದಿದ್ದಾರೆ. ಐತಿಹಾಸಿಕವಾಗಿ ದಲಿತ ಮಕ್ಕಳು ಶಿಕ್ಷಣದಿಂದ ವಂಚಿತರಗಿದ್ದು ಈಗಲೂ ಮತ್ತೊಮ್ಮೆ ನಿರಾರಕರಣೆಗೊಳಪಡುತ್ತಿದ್ದಾರೆ ಎಂದರು.
೩. ಜೇನುಕುರುಬ ಬುಡಕಟ್ಟು ಸಮುದಾಯದ ಮಕ್ಕಳು ಕುಟುಂಬದ ಆರ್ಥಿಕ ಅಭದ್ರತೆಯಿಂದಾಗಿ ಶಾಲೆಯಿಂದ ಹೊರಗುಳಿದು, ದುಡಿಮೆಗೆ ತಳ್ಳಲ್ಪಟ್ಟರು ಎಂಬ ವಿಷಯ ಹಂಚಿಕೊಂಡರು.

೪. ತೀವ್ರ ಪ್ರವಾಹದಿಂದ ತತ್ತರಿಸಿದ ಗ್ರಾಮಗಳಲ್ಲಿನ ಶಾಲೆಗಳ ಪರಿಸ್ಥಿತಿ ಇನ್ನೂ ಹಾಗೆಯೇ ಇದೆ. ಇಂದಿಗೂ ಕಲಿಕಾ ಸಲಕರಣೆಗಳು ಈ ಶಾಲೆಗೆ ತಲುಪಿಲ್ಲ.
೫. ಪ್ರವಾಹದಿಂದ ತತ್ತರಿಸಿರುವ ಜನರಿಗೆ ಇನ್ನೂ ಸರಿಯಾದ ಪರಿಹಾರ ಕ್ರಮಗಳು ಸರ್ಕಾರ ಮಾಡಬೇಕಾಗಿದೆ. ಕೃಷಿ ಪರಿಹಾರಗಳು ಸಿಗದೇ ಇರುವುದು, ಸಮರ್ಪಕ ಸರ್ಕಾರಿ ಕಾರ್ಯಕ್ರಮಗಳು ಜನರಿಗೆ ಅನುಷ್ಠಾನವಾಗದೇ ಇರುವುದರ ನೇರ ಪರಿಣಾಮ ಮಕ್ಕಳ ಮೇಲೆಯೂ ಬೀರಿದೆ ಎಂದರು.
೬. ಸ್ಥಳೀಯ ತಾಲ್ಲೂಕು ಶಿಕ್ಷಣಾಧಿಕಾರಿಯವರ ಸಹಕಾರದಿಂದ ೨೭ ವಿದ್ಯಾರ್ಥಿಗಳಿಗೆ ವರ್ಗಾವಣೆ ಪತ್ರ ದೊರೆಯುವುದು ಸಾಧ್ಯವಾಯಿತು ಎಂಬ ಸಕಾರಾತ್ಮಕ ವಿಷಯವನ್ನು ಹಂಚಿಕೊಂಡರು. ಶಾಲೆಯಿಂದ ಹೊರಗುಳಿದ ಎಲ್ಲಾ ಮಕ್ಕಳ ಸರ್ವೆಯನ್ನು ಸರ್ಕಾರ ತಕ್ಷಣದಲ್ಲಿ ಕೈಗೊಳ್ಳಬೇಕು ಮತ್ತು ಈ ಮಕ್ಕಳು ಮರು ಶಾಲೆಗೆ ಸೇರುವ ದಿಶೆಯಲ್ಲಿ ಸರ್ಕಾರ ಯೋಜನೆಯನ್ನು ತಯಾರಿಸಬೇಕು.
೭. ಗ್ರಾಮೀಣ ಭಾಗದಲ್ಲಿ ಮಕ್ಕಳಗ್ರಾಮ ಸಭೆ, ಮಹಿಳಾ ಗ್ರಾಮ ಸಭೆ, ಯುವ ಜನರ ಗ್ರಾಮ ಸಭೆ ಮತ್ತು ಎಸ್.ಸಿ ಹಾಗೂ ಎಸ್.ಟಿ ಸಮುದಾಯದ ಸಭೆಗಳು ಕಡ್ಡಾಯವಾಗಿ ನಡೆಯಲೇಬೇಕೆಂದಿದ್ದರೂ ಇಂದಿಗೂ ನಡೆಯುತ್ತಿಲ್ಲ. ಈ ಸಭೆಯು ನಡೆಯುತ್ತಾ ಬಂದಲ್ಲಿ ಸ್ಥಳೀಯ ಜನರ ಪ್ರಶ್ನೆಗಳನ್ನು, ಹಕ್ಕೊತ್ತಾಯಗಳನ್ನು, ಅವರ ಸಾಮಾಜಿಕ ಭಧ್ರತೆಯ ವಿಷಯವನ್ನು ಜನಪ್ರತಿನಿಧಿಗಳೊಂದಿಗೆ ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿಟ್ಟು ಪರಿಹಾರ ಕ್ರಮವನ್ನು ಕೈಗೊಳ್ಳಬಹುದಾಗಿದೆ.
೮. ಬಾಗಲಕೋಟೆ, ಬೆಳಗಾವಿ ಭಾಗದಲ್ಲಿ ಮಕ್ಕಳು ಶಾಲೆಬಿಟ್ಟು ಇಟ್ಟಂಗಿ ಭಟ್ಟಿಯಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ.
೯. ಸರ್ಕಾರಿ ಆಶ್ರಮ ಶಾಲೆಗಳನ್ನು ಸಮಾಜ ಕಲ್ಯಾಣ ಇಲಾಖೆ ನಡೆಸುತ್ತಿದ್ದು, ಸಮರ್ಪಕ ಮೂಲ ಸೌಕರ್ಯಗಳನ್ನಾಗಲಿ, ಅಧ್ಯಾಪಕರ ನೇಮಕವನ್ನಾಗಲಿ ಮಾಡಲಿಲ್ಲ. ಗುಣಮಟ್ಟದ ಶಿಕ್ಷಣದ ಕೊರತೆಯನ್ನು ಮಕ್ಕಳು ಎದುರಿಸುತ್ತಿದ್ದಾರೆ.
೧೦. ನಿರಂತರ ವಲಸೆಯ ಕಾರಣದಿಂದ ಗ್ರಾಮೀಣ ಭಾಗದಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರಬಹುದು, ಅಥವಾ ಹೆಚ್ಚಿರಲೂ ಸಾಧ್ಯತೆಯಿದೆ. ಮಕ್ಕಳ ದಾಖಲಾತಿ ಪ್ರಮಾಣ ಕಡಿಮೆಯಾಗುತ್ತಿರಬಹುದು. ಹೀಗಾಗಿ ಬೆಂಗಳೂರು ನಗರದಲ್ಲಿ ಈ ಕಾರಣಕ್ಕಾಗಿಯೇ ಮಕ್ಕಳ ಸಂಖ್ಯೆ ಜಾಸ್ತಿಯಾಗಿರಬಹುದು. ಶಾಲಾ ಶುಲ್ಕ ಪಾವತಿಸಲು ಸಾಧ್ಯವಾಗದೆ ಸರ್ಕಾರಿ ಶಾಲೆಗೆ ಮರಳಿ ಸೇರಿರಬಹುದು ಮತ್ತು ಕೆಲವು ಸರ್ಕಾರಿ ಶಾಲೆಯು ಮಕ್ಕಳಿಂದ ತುಂಬಿಕೊಂಡಿರಬಹುದು.
೧೧. ಆನ್‌ಲೈನ್ ಶಿಕ್ಷಣ ಪಡೆಯಲು ಸಲಕರಣೆಗಳೇ ಇರಲಿಲ್ಲ. ನೆಟ್‌ವರ್ಕ್ ಅಭಾವವೂ ಎದುರಾಗಿತ್ತು. ಇದರಿಂದಾಗಿ ಮಕ್ಕಳು ಶಿಕ್ಷಣ ಪಡೆಯಲೂ ಸಾಧ್ಯವಾಗಲಿಲ್ಲ.

**ಶಿಫಾರಸ್ಸುಗಳು:**
ಸಾರ್ವಜನಿಕ ಅಹವಾಲಿನಲ್ಲಿ ವ್ಯಕ್ತಪಡಿಸಿದ ವಿಷಯವನ್ನು ಮಕ್ಕಳ ಕೇಂದ್ರಿತವಾಗಿ ಗಮನಿಸಿ ಶಿಫಾರಸ್ಸನ್ನು ಈ ಕೆಳಗೆ ಪಟ್ಟಿಮಾಡಿದ್ದೇವೆ. ಇವುಗಳು ಯಾವುದೇ ರೀತಿಯಲ್ಲಿ ಬೇರೆ ವಿಷಯಕ್ಕೆ ಅನ್ವಯಿಸುವುದಿಲ್ಲ.

ಈ ಶಿಫಾರಸ್ಸುಗಳು ನಾವು ಮಾಡುತ್ತಿರುವ ಕೆಲಸ, ಸ್ಥಳೀಯ ಮಕ್ಕಳ ಶಿಕ್ಷಣದ ಹಕ್ಕು, ಪೋಷಕರ ಅನುಭವಗಳಿಗೆ ಹಾಗೂ ಸಮುದಾಯದ ಹಕ್ಕೊತ್ತಾಯವನ್ನುಆಧರಿಸಿವೆ.

ಸರ್ಕಾರ ಮಕ್ಕಳಿಗೆ ಸಂಬಂಧಿಸಿದಂತೆ ಒಟ್ಟು ಆಯವ್ಯಯದಲ್ಲಿ ಹೆಚ್ಚುವರಿ ಅನುದಾನ ಮೀಸಲಿಡುವ ಅನಿವಾರ್ಯತೆಯಿದೆ. – ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಉನ್ನತ ಶಿಕ್ಷಣ, ಸಮಾಜ ಕಲ್ಯಾಣ ಇಲಾಖೆ, ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಇಲಾಖೆಗಳನ್ನು ಇವು ಒಳಗೊಂಡಿದೆ. ಆದರೆ ೨೦೨೨ರ ಆಯವ್ಯಯವನ್ನು ಗಮನಿಸಿ ಈ ಹಿಂದಿನ ವರ್ಷದ ಆಯವ್ಯಯಕ್ಕೆ ಹೋಲಿಸಿದರೆ ಬಹಳಷ್ಟು ವ್ಯತ್ಯಾಸವಿದೆ. ಸರ್ಕಾರ ಮಕ್ಕಳ ಕೇಂದ್ರಿತ ಆಯವ್ಯಯವನ್ನು ಮುಂದಿನ ದಿನಗಳಲ್ಲಿ ಘೋಷಿಸಿ ಜಾರಿಗೊಳಿಸಬೇಕು. ಈ ಮೂಲಕ ಸರ್ಕಾರ ಮಕ್ಕಳ ಕೇಂದ್ರಿತವಾಗಿ ಅವರ ಸಮಗ್ರ ಅಭಿವೃದ್ಧಿಗೆ ಮಾಡುವ ಖರ್ಚು ವೆಚ್ಚಗಳ ವಿವರ ಪಡೆಯಬುದು.

**ಸರ್ಕಾರದ ಗಮನಕ್ಕಾಗಿ:**
ಸರ್ಕಾರ ಎಲ್ಲಾ ಜಿಲ್ಲೆಗಳಲ್ಲಿ ಮಕ್ಕಳ ಶಿಕ್ಷಣದ ಕುರಿತು ಸಾರ್ವಜನಿಕ ಅಹವಾಲು ಕಾರ್ಯಕ್ರಮ ಜರುಗಿಸಬೇಕು, ಹಾಗೆಯೇ ಎಲ್ಲಾ ವರದಿಯನ್ನು ಕ್ರೋಢೀಕರಿಸಿ, ವಿಧಾನ ಸಭೆಯ ಕಲಾಪಗಳಲ್ಲಿ ಈ ವಿಷಯವನ್ನು ಪ್ರಮುಖ ವಿಷಯವಾಗಿ ಸವಿಸ್ತಾರತೆಯಲ್ಲಿ ಚರ್ಚಿಸಿ, ಪರಿಹಾರ ಕ್ರಮವನ್ನು ಕೈಗೊಳ್ಳುವ ಕಾರ್ಯಕ್ರಮ ತಯಾರಿಸಬೇಕು.

**ಪ್ರಾಥಮಿಕ ಮತ್ತು ಪೌಢ ಶಿಕ್ಷಣ ಇಲಾಖೆ:**

**ಸಮಸ್ಯೆಯ ತೀವ್ರತೆ ಹಾಗೂ ವ್ಯಾಪ್ತಿಯನ್ನು ಅರ್ಥೈಸಿಕೊಳ್ಳುವುದು:**
೧. ಮಕ್ಕಳು ಶಾಲೆಯಲ್ಲಿರುವುದು ಅವರ ಮೂಲಭೂತ ಹಕ್ಕು ಎಂದು ಶಿಕ್ಷಣದ ಹಕ್ಕು ಕಾಯ್ದೆ ಉಲ್ಲೇಖಿಸುತ್ತದೆ. ಹೀಗಾಗಿ ಸರ್ಕಾರ ಎಲ್ಲಾ ಮಕ್ಕಳು ಶಾಲೆಯಲ್ಲಿರುವ ಹಾಗೆ ಖಚಿತಗೊಳಿಸಬೇಕು. ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಸಮನ್ವಯಿಕತೆಯಲ್ಲಿ ಸರ್ಕಾರ ತುರ್ತಾಗಿ ಶಾಲೆಬಿಟ್ಟ ಮಕ್ಕಳ ಸಮಗ್ರ ಸರ್ವೆಯನ್ನು ನಡೆಸಬೇಕು.

**ಎಲ್ಲಾ ಮಕ್ಕಳು ಶಾಲೆಗೆ ಮರಳಿಬರಬೇಕು**
೨. ಶೋಷಿತ ಸಮುದಾಯದ ಎಲ್ಲಾ ಮಕ್ಕಳು ಶಾಲೆಗೆ ಸೇರುವ ದಿಶೆಯಲ್ಲಿ ನಿರ್ದಿಷ್ಟವಾದ ಪ್ರಯತ್ನವನ್ನು ಸರ್ಕಾರ ಮಾಡಲೇಬೇಕು.
೩. ಮಕ್ಕಳು ಶಾಲೆಗೆ ಸೇರಲು ಹಾಗೂ ಶಾಲೆ ಬದಲಾಯಿಸಲು ಅವಶ್ಯವಿರುವ ವರ್ಗಾವಣೆ ಪತ್ರ ಮಕ್ಕಳಿಗೆ ಯಾವುದೇ ಅಡೆತಡೆಯಿಲ್ಲದೆ ಸಿಗುವ ದಿಶೆಯಲ್ಲಿ ತಾಲ್ಲೂಕು ಶಿಕ್ಷಣ ಇಲಾಖಾಧಿಕಾರಿಯು ಖಾತರಿಗೊಳಿಸಬೇಕು.

೪. ಶಿಕ್ಷಣ ಮಕ್ಕಳ ಮೂಲಭೂತ ಹಕ್ಕು. ಪೋಷಕರು ಬಾಕಿ ಶಾಲಾ ಶುಲ್ಕ ಪಾವತಿಸದೇ ಇದ್ದರೂ, ಮಕ್ಕಳನ್ನು ಇನ್ನೊಂದು ಶಾಲೆಗೆ ಸೇರಿಸುವ ಕಾರಣಕ್ಕಾಗಿ ಮಕ್ಕಳ ಶಾಲಾ ವರ್ಗಾವಣೆ ಪತ್ರ ಪಡೆಯುವುದು ಅವರ ಹಕ್ಕು ಎಂಬುವುದನ್ನು ಖಾತರಿ ಪಡಿಸಲು ಸರ್ಕಾರ ಜನಸ್ನೇಹಿಯಾಗಿ ಜಾಗೃತಿ ಆಂದೋಲನ ನಡೆಸಬೇಕು.
೫. ಸುತ್ತೋಲೆ- **https://schooleducation.kar.nic.in/pdffiles/TC29112021.pdf**
(from https://schooleducation.kar.nic.in/html/circularsgen.html) ಪೋಷಕರು ತಮ್ಮ ಮಗುವನ್ನು ಸರ್ಕಾರಿ ಶಾಲೆಗೆ ಅಥವಾ ಅನುದಾನಿತ ಶಾಲೆಗೆ ಸೇರ್ಪಡೆ ಮಾಡುವ ಸಲುವಾಗಿ ವರ್ಗಾವಣೆ ಪತ್ರ ನೀಡಬೇಕೆಂದು ಕೋರಿದ್ದಲ್ಲಿ ಒಂದು ವಾರದೊಳಗಡೆ ಶಾಲಾಡಳಿತ ವ್ಯವಸ್ಥಾಪಕರು ವರ್ಗಾವಣೆ ಪತ್ರ ನೀಡಲೇಬೇಕೆಂದು ಈ ಮೇಲಿನ ಸುತ್ತೋಲೆ ಖಾತರಿ ಪಡಿಸುತ್ತದೆ. ಶಾಲಾಡಳಿತ ವರ್ಗಾವಣೆ ಪತ್ರವನ್ನು ನಿಗಧಿತ ಸಮಯದಲ್ಲಿ ನೀಡಲು ನಿರಾಕರಿಸಿದ್ದಲ್ಲಿ ಸ್ಥಳೀಯ ಬಿ.ಇ.ಒ ಅವರ ಗಮನಕ್ಕೆ ತರಬೇಕು ಮತ್ತು ಅವರು ಶಾಲಾ ಮುಖ್ಯಸ್ಥರಿಗೆ ನೋಟೀಸು ಜಾರಿಗೊಳಿಸಿ ಒಂದು ವಾರದೊಳಗೆ ಕ್ರಮವಹಿಸುವಂತೆ ಕೋರಿ ಪತ್ರಬರೆಯಬೇಕು. ಇನ್ನೂ ಶಾಲಾ ಮುಖ್ಯಸ್ಥರು ಎಚ್ಚೆತ್ತು ಕೊಂಡು ವರ್ಗಾವಣೆ ಪತ್ರ ನೀಡಲಿಲ್ಲ ಎಂದಾಗ ಬಿ.ಇ.ಒ ಶಾಲಾ ಮುಖ್ಯಸ್ಥರು ಹಾಗೂ ಶಾಲಾಡಳಿತದ ವಿರುದ್ಧ ಶಿಸ್ತುಕ್ರಮ ಜರುಗಿಸಬೇಕೆಂದು ಉಲ್ಲೇಖಿಸಿದೆ.
೬. ಅನೇಕ ಮಕ್ಕಳು ಖಾಸಗೀ ಶಾಲೆಯಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಯುತ್ತಿದ್ದು, ಅವರ ಪೋಷಕರು ಶಾಲಾ ಶುಲ್ಕ ಕಟ್ಟಿಲ್ಲ ಎನ್ನುವ ಕಾರಣಕ್ಕೆ ಶಾಲೆಯಿಂದ ಹೊರಗುಳಿದಿರುವರು.  ಈಗಾಗಲೇ ಇಂಗೀಷ್ ಮಾಧ್ಯಮದಲ್ಲಿ ಓದುತ್ತಿದ್ದ ಮಕ್ಕಳು ತಕ್ಷಣ ಕನ್ನಡ ಮಾಧ್ಯಮದಲ್ಲಿ ಭೋದನೆಗೆ ಒಳಗಾಗಿ ಹೊಂದಿಕೊಳ್ಳುವುದು ಬಹಳ ಕಷ್ಟ. ಈ ವಿಷಯವನ್ನು ಶಿಕ್ಷಣ ಇಲಾಖೆ ಕೂಡಲೆ ಗಮನಹರಿಸಬೇಕು. ಇಲ್ಲದಿದ್ದಲ್ಲಿ ಶಾಲಾ ಬಿಟ್ಟು ಹೊರಗುಳಿಯುವ ಮಕ್ಕಳ ಸಂಖ್ಯೆ ಹೆಚ್ಚಾಗುವುದು.

**ಶಾಲೆಯಲ್ಲಿನ ಕೆಲಸಗಳು**:

೭. ಮಕ್ಕಳು ೨ವರ್ಷಗಳಿಂದ ಶಾಲೆಯಲ್ಲಿರಲಿಲ್ಲ ಎಂಬ ಅಂಶವನ್ನು ಪರಿಗಣನೆಗೆ ತೆಗೆದುಕೊಂಡು ಮಕ್ಕಳ ಬೋಧನೆಯನ್ನು ನಿರ್ಧರಿಸಬೇಕು. ಈಗ ೫ನೇ ತರಗತಿಯಲ್ಲಿರುವ ಮಗು ೩ ಮತ್ತು ೪ನೇ ತರಗತಿಯ ಬೋಧನೆಗೆ ಒಳಗಾಗಿಲ್ಲ ಎಂಬ ವಿಷಯವನ್ನು ಅರ್ಥೈಸಿಕೊಂಡು ಆ ಮಗುವಿನ ಕಲಿಕೆ ಆರಂಭಿಸಬೇಕು. ನೇರವಾಗಿ ೫ನೇ ತರಗತಿಯ ಪಠ್ಯಕ್ರಮವನ್ನು ಬೋಧಸುವುದು ಅರ್ಥಹೀನವಾಗುತ್ತದೆ. ಈ ಕಾರಣಕ್ಕಾಗಿಯೇ ಮಗು ಶಾಲೆಯಿಂದ ಹೊರಗುಳಿಯುವ ಸಾಧ್ಯತೆ ಹೆಚ್ಚಿರುತ್ತದೆ.  ಆದ್ದರಿಂದ ಮಕ್ಕಳನ್ನು ಬೆಂಬಲಿಸುವ ಸಲುವಾಗಿ ಶಿಕ್ಷಕರನ್ನು ಸಜ್ಜುಗೊಳಿಸುವ, ಅವರ ಸಾಮರ್ಥ್ಯವನ್ನು ಹೆಚ್ಚಿಸುವ, ಅವರು ಹೆಚ್ಚುವರಿ ಬೋಧನೆಯನ್ನು ಮಕ್ಕಳಿಗೆ ನೀಡುವ ಸಲುವಾಗಿ ಶಿಕ್ಷಕರಿಗೆ ಇಲಾಖೆಯ ವತಿಯಿಂದ ತರಬೇತಿ ನೀಡುವ ಕಾರ್ಯಕ್ರಮ ಸರ್ಕಾರ ರೂಪಿಸಬೇಕು. ತರಗತಿಯಲ್ಲಿನ ಎಲ್ಲಾ ಮಕ್ಕಳು ಕಲಿಯಲು, ಪ್ರಗತಿಸಾಧಿಸಲು ಬೇಕಾದ ಹೆಚ್ಚುವರಿ ಶಿಕ್ಷಣವನ್ನು ಸರ್ಕಾರ ಮಕ್ಕಳಿಗೆ ಶಾಲೆಯಲ್ಲಿ ಒದಗಿಸಬೇಕು.
೮. ತರಗತಿಯಲ್ಲಿರುವ ಎಲ್ಲಾ ಮಕ್ಕಳು ಕಲಿಯಲು ಅನುವು ಮಾಡಿಕೊಡುವ ರೀತಿಯಲ್ಲಿ ಶಿಕ್ಷಕರು ತೊಡಗಿಸಿಕೊಳ್ಳುವ ದಿಶೆಯಲ್ಲಿ ಸರ್ಕಾರ ಕಾರ್ಯಕ್ರಮ ರೂಪಿಸಬೇಕು. ಇದು ಬಹು ಹಂತದ ಕಲಿಕೆಯ ವಿಧಿವಿಧಾನ ಬೋಧನಾ ಕ್ರಮಗಳನ್ನು ಸೂಚಿಸುತ್ತದೆ. ಈ ಬಹು ಹಂತದ ಕಲಿಕೆಗೆ ಪೂರಕ ಸಂಪನ್ಮೂಲವನ್ನು ಒದಗಿಸುವ ಜವಾಬ್ದಾರಿಯನ್ನು ಸರ್ಕಾರ ನಿರ್ವಹಿಸಬೇಕು.
೯. ಆನ್‌ಲೈನ್ ಶಿಕ್ಷಣ ಒಂದೇ ಪರಿಹಾರವಲ್ಲ. ಭವಿಷ್ಯದಲ್ಲಿ, ಈ ರೀತಿಯ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಶಾಲೆಗಳನ್ನು ಕೊನೆಯದಾಗಿ ಮುಚ್ಚಬೇಕು ಹಾಗೆಯೇ ಎಲ್ಲಕ್ಕಿಂತ ಮೊದಲು ಶಾಲೆಗಳನ್ನು ತೆರೆಯಬೇಕು.
೧೦. ಸಾಂಕ್ರಾಮಿಕ ರೋಗದ ಭೀಕರತೆ ಬಡಕುಟುಂಬಗಳ ಹಸಿವಿನ ಮೇಲೆ ಬೀರಿದೆ. ಈ ಕುಟುಂಬಗಳಲ್ಲಿನ ಮಕ್ಕಳು ಪೌಷ್ಟಿಕ ಆಹಾರದ ಕೊರತೆಯನ್ನು ಅನುಭವಿಸುತ್ತಿದ್ದಾರೆ. ಸರ್ಕಾರ ಮಧ್ಯಾಹ್ನ ಬಿಸಿಯೂಟ ಯೋಜನೆಯಾದ ಅಕ್ಷರ ದಾಸೋಹ ಹಾಗು ಕ್ಷೀರ ಭಾಗ್ಯ ಯೋಜನೆಗೆ ಹೆಚ್ಚುವರಿ ಹಣ ವಿನಿಯೋಗಿಸಬೇಕು. ಈ ಮುಖೇನ ಮಕ್ಕಳಿಗೆ ಹೆಚ್ಚು ಮೊಟ್ಟೆ, ಸೊಪ್ಪು ತರಕಾರಿಗಳು ಹಾಗೂ ಹಣ್ಣುಗಳನ್ನು ನೀಡುವ ಕಾರ್ಯಕ್ರಮ ಜಾರಿಗೊಳಿಸಬೇಕು.
೧೧. ಸರ್ಕಾರಿ ಆಶ್ರಮ ಶಾಲೆಗಳ ಶೈಕ್ಷಣಿಕ ನಿರ್ವಹಣೆಯನ್ನು ಶಿಕ್ಷಣ ಇಲಾಖೆಗೆ ವರ್ಗಾಯಿಸುವ ಕುರಿತು ಸರ್ಕಾರ ೨೦೧೭ರಲ್ಲಿಯೇ ಸುತ್ತೋಲೆ ಹೊರಡಿಸಿದೆ. ಬುಡಕಟ್ಟು ಮಕ್ಕಳ ಗುಣಮಟ್ಟದ ಶಿಕ್ಷಣಕ್ಕೆ ಸರ್ಕಾರ ಒತ್ತುನೀಡಿ ಶಿಕ್ಷಣ ಇಲಾಖೆ ಕೂಡಲೆ  ಸಮರ್ಪಕವಾಗಿ ಕಾರ್ಯಪ್ರವರ್ತರಾಗಬೇಕು.
೧೨ ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯ ಹಾಗೂ ಅವರ ಯೋಗ ಕ್ಷೇಮಕ್ಕಾಗಿ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ, ಪ್ರತೀ ಶಾಲೆಯಲ್ಲಿ ಮಕ್ಕಳ ಆರೋಗ್ಯ ತಪಾಸಣೆ ಹಾಗೂ ಮಕ್ಕಳೊಂದಿಗೆ ಆಪ್ತ ಸಮಾಲೋಚನೆಯನ್ನು ಎಲ್ಲಾ ಶಾಲೆಯಲ್ಲಿ ಆಯೋಜಿಸಬೇಕು.
೧೩. ಬಿ.ಇಡಿ, ಡಿ.ಇಡಿ, ಪದವಿ ಹಾಗೂ ಡಿಪ್ಲೊಮೋ ಪಡೆದ ಯುವ ಸಮುದಾಯವನ್ನು ಒಳಗೊಂಡಂತೆ ಮಕ್ಕಳಿಗೆ ಹೆಚ್ಚುವರಿ ಬೋಧನೆಯ ವಿಷಯವಾಗಿ ನಿರಂತರತೆಯಲ್ಲಿ ಗ್ರಾಮ, ವಾರ್ಡು ಮಟ್ಟದಲ್ಲಿ ಕಲಿಕಾ ಕೇಂದ್ರಗಳನ್ನು ಒಂದಷ್ಟು ವರ್ಷಗಳವರೆಗೂ ಸ್ಥಳೀಯ ಸಮುದಾಯ ಭವನಗಳಲ್ಲಿ ನಡೆಸುವಂತೆ ಸರ್ಕಾರ ಸಹಕರಿಸಬೇಕು.
೧೪. ಹೆಚ್ಚುವರಿ ಕಲಿಕಾ ಪರಿಕರಗಳಾದ ಪುಸ್ತಕಗಳು, ವರ್ಕಬುಕ್, ಇತರೆ ಕಲಿಕಾ ಸಾಮಗ್ರಿಗಳನ್ನು ವಿದ್ಯಾರ್ಥಿಗಳಿಗೆ ನೀಡಲು ಸರ್ಕಾರ ಸಂಪನ್ಮೂಲ ವಿನಿಯೋಗಿಸಬೇಕು.
೧೫. ಸ್ಥಳೀಯ ಮಟ್ಟದಲ್ಲಿ ಮಕ್ಕಳಿಗೆ ಕಲಿಕೆ ನಿರಂತರವಾಗಿ ಸಿಗುವ ದಿಶೆಯಲ್ಲಿ ವಿದ್ಯಾಗಮ ಕಾರ್ಯಕ್ರಮ ಸರ್ಕಾರ ಮರುಆರಂಭಿಸಬೇಕು. ಇದರಿಂದ ಮಕ್ಕಳು ಶಾಲಾ ಶಿಕ್ಷಣಕ್ಕೆ ಮುಖಮಾಡುವಂತೆ ಅನುಕೂಲಕರ ವಾತಾವರಣ ಕಲ್ಪಿಸಬೇಕು. ಮಕ್ಕಳಿರುವ ಪ್ರಸ್ತುತ ಸಂದರ್ಭವನ್ನು ಅರಿತು, ಅವರನ್ನು ಬೆಂಬಲಿಸುವ ದಿಶೆಯಲ್ಲಿ ಸುಸಜ್ಜಿತ ಶಾಲೆಗಳು, ವೃತ್ತಿಪರ ತರಬೇತಿ, ಸೂಕ್ತವಾದ ಪಠ್ಯೇತರ ಚಟುವಟಿಕೆಗಳು ಮಧ್ಯಾಹ್ನ ಬಿಸಿಯೂಟಕ್ಕೆ ಆದ್ಯತೆಯಲ್ಲಿ ಸಂಪನ್ಮೂಲ ಕ್ರೋಢೀಕರಿಸಿ ಗಮನಹರಿಸಬೇಕು.
೧೬. ಬಡಕುಟುಂಬಗಳಲ್ಲಿನ, ಏಕ ಪೋಷಕರ ಪಾಲನೆಯಲ್ಲಿರುವ, ಸಂಕಷ್ಟ ಸ್ಥಿತಿಯಲ್ಲಿರುವ ವಲಸೆ ಸಮುದಾಯಗಳ ಮಕ್ಕಳ ಶಿಕ್ಷಣವನ್ನು ಪ್ರೇರೇಪಿಸಲು ಉಚಿತ ಶಿಕ್ಷಣ, ಪರಿಹಾರ ಬೋಧನಾ ಕಾರ್ಯಕ್ರಮ ಸರ್ಕಾರ ರೂಪಿಸಿ ಜಾರಿಗೊಳಿಸಬೇಕು.
೧೭. ವಲಸೆ ಸಮುದಾಯದ ಮಕ್ಕಳು, ಕೋವಿಡ್ ನಿಂದ ತಂದೆ ತಾಯಿ, ಆರೈಕೆ ಮಾಡುತ್ತಿದ್ದ ಪೋಷಕರನ್ನು ಕಳೆದುಕೊಂಡಿರುವ ಮಕ್ಕಳು, ವಸತಿಯನ್ನು ಕಳೆದುಕೊಂಡಿರುವವರ ಮಕ್ಕಳಿಗೂ ನೆರವಾಗುವಂತೆ, ವಿದ್ಯಾರ್ಥಿ ನಿಲಯ ಪ್ರವೇಶ ದೊರಕಿಸಿಕೊಡಬೇಕು. ಅಲ್ಲದೆ, ವಿದ್ಯಾರ್ಥಿವೇತನ, ಶಾಲಾ ಶುಲ್ಕ ಮನ್ನಾ ಮತ್ತು ಶಾಲೆಯ ಇತರೆ

ಖರ್ಚು ನಿಭಾಯಿಸಲು ಈ ಮಕ್ಕಳಿಗೆ ಸರ್ಕಾರ ಬೆಂಬಲಿಸುವಂತೆ ಕಾರ್ಯಕ್ರಮ ರೂಪಿಸಬೇಕು. ಮಗು ಖಾಸಗೀ ಶಾಲೆಯಲ್ಲಿಯಾಗಲಿ, ಸರ್ಕಾರಿ ಅನುದಾನಿತ ಶಾಲೆಯಲ್ಲಿ ಅಥವಾ ಸರ್ಕಾರಿ ಶಾಲೆಯಲ್ಲಾದರೂ ಓದುತ್ತಿರಲಿ ಅವರ ಹಿನ್ನೆಲೆಯನ್ನು ಆಧರಿಸಿ ಈ ಬೆಂಬಲ ನೀಡಬೇಕು.

೧೮. ಮಕ್ಕಳ ಹಕ್ಕು ಮತ್ತು ಮಕ್ಕಳ ರಕ್ಷಣೆಗೆ ತೊಡಗಿಸಿಕೊಂಡ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಸ್ಥಳೀಯ ಸಂಘಟನೆಗಳ ಪರಿಣತಿಯನ್ನು ಒಳಗೊಳಿಸಿ ಮಕ್ಕಳಿಗೆ ಮಾನಸಿಕ -ಸಾಮಾಜಿಕ ಸಮಾಲೋಚನೆಯ ಉಪಕ್ರಮಗಳನ್ನು ವಿನ್ಯಾಸಗೊಳಿಸುವುದು.

೧೯. ಅಂಚಿಗೆ ತಳ್ಳಲ್ಪಟ್ಟ ಮಕ್ಕಳು ಮರಳಿ ಶಿಕ್ಷಣ ಪಡೆಯಲು ಪೂರಕವಾಗಿ ವಿಶೇಷ ಕಾರ್ಯಕ್ರಮವನ್ನು ಸರ್ಕಾರ ರೂಪಿಸಿ ಜಾರಿಗೊಳಿಸಬೇಕು.

೨೦. ಸರ್ಕಾರಿ ಶಾಲೆಗಳಿಲ್ಲದ ಜಾಗಗಳಲ್ಲಿ ಸರ್ಕಾರ ಪ್ರಜ್ಞಾಪೂರ್ವಕವಾಗಿ ಹೊಸ ಸರ್ಕಾರಿ ಶಾಲೆಯನ್ನು ತೆರೆಯಬೇಕು. ಈ ಶಾಲೆಗಳಲ್ಲಿ ಸುಸಜ್ಜಿತವಾದ ಮೂಲಭೂತ ಸೌಕರ್ಯ, ಶೈಕ್ಷಣಿಕ ಸಲಕರಣೆಗಳು, ಬೋಧನಾ ಪರಿಕರಗಳು, ತರಗತಿವಾರು, ವಿಷಯವಾರು ಅಧ್ಯಾಪಕರನ್ನೂ ನೇಮಕಾತಿ ಮಾಡಲೇಬೇಕು. ಈ ಜವಾಬ್ದಾರಿಯನ್ನು ಖಾಸಗೀ ಶಾಲೆಗಳಿಗೆ ಬಿಟ್ಟುಕೊಡಬಾರದು. (ಶುಲ್ಕ ಪಾವತಿಯ ಬಿಕ್ಕಟ್ಟು ಖಾಸಗೀ ಶಾಲೆಗೆ ಅವಲಂಬಿಸಿರುವ ಸ್ಪಷ್ಟ ಸೂಚನೆ, ಅಲ್ಲದೆ ಈ ಶಾಲೆಗಳು ಸಾರ್ವತ್ರಿಕ ಹಾಗೂ ಸಮಾನ ಪ್ರವೇಶವನ್ನು ನೀಡುತ್ತಿಲ್ಲ). ಸರ್ಕಾರ ಹಳ್ಳಿ/ವಾರ್ಡು ಮಟ್ಟದಲ್ಲಿ ಜನಸಂಖ್ಯೆ ಆಧರಿಸಿ ಶಾಲೆಗಳನ್ನು ತೆರೆಯಲು ಹಂತಹಂತವಾಗಿ ಆದ್ಯತೆಯಲ್ಲಿ ಪ್ರಯತ್ನಿಸಬೇಕು.

೨೧. ತಮಿಳುನಾಡು ಸರ್ಕಾರ ಕೋವಿಡ್ ಸಾಂಕ್ರಾಮಿಕತೆಯ ಸಂದರ್ಭದಲ್ಲಿ ಮಕ್ಕಳಿಗಾದ ಕಲಿಕಾ ಸಮಸ್ಯೆಯನ್ನು ಸರಿದೂಗಿಸಲು ಸಮುದಾಯ ಮಟ್ಟದಲ್ಲಿ ಕಲಿಕಾ ಸಹಕಾರ ಕಾರ್ಯಕ್ರಮ ಜಾರಿಗೊಳಿಸಿದೆ. ಇಲ್ಲಂ ತೇಡಿ ಕಲ್ವಿ ಹಾಗೂ ಎನ್ನುಂ ಎಯುತ್ತುಂ (ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರ) ಕಾರ್ಯಕ್ರಮ ಕರ್ನಾಟಕದಲ್ಲೂ ಜಾರಿಗೊಳಿಸಬೇಕು.

ಸಾರ್ವಜನಿಕ ಅಹವಾಲಿನ ಪೂರ್ಣ ವರದಿಗಾಗಿ ಈ ಲಿಂಕನ್ನು ಒತ್ತಿ-
https://educationemergency.net/2022/04/public-hearing-covid-impact-on-education-of-vulnerable-children/

ಧನ್ಯವಾದಗಳೊಂದಿಗೆ,


ನಂದಿನಿ
ಆಕ್ಷನ್ಏಯ್ಡ್ ಅಸೋಸಿಯೇಶನ್
9901088012

ಜಾನ್ಸಿ
ಸ್ಲಂ ಮಹಿಳಾ ಸಂಘಟನೆ
9902248832

ಕವಿತಾ ರತ್ನ
ಕನ್ಸರ್ನಡ್ ಫಾರ್ ವರ್ಕಿಂಗ್ ಚಿಲ್ಡ್ರನ್
9448990480

ವಿನಯ್ ಕೆ ಶ್ರೀನಿವಾಸ
ಪರ್ಯಾಯ ಕಾನೂನು ವೇದಿಕೆ
9880595032

ಗುರುಮೂರ್ತಿ
ಐ.ಟಿ ಫಾರ್ ಚೇಂಜ್

ಕೌಸಲ್ಯ ಮತ್ತು ಸಂಗೀತಾ
ಪೋಷಕರು